TRAUMA CENTRES under KFW

Sl. No.	Place	District	Stage of work
1	Hospet	Bellary	Works under progress
2	Humnabad	Bidar	-do-
3	Shahapur	Gulbarga	-do-
4	Gangawati	Raichur	-do-
5	Lingasugur	Raichur	-do-
6	Sindhnur	Raichur	-do-
7	Raichur	Raichur	Located in Superintending Hospital (OPEC)
8	Bellary	Bellary	Work to be taken up
9	Bidar	Bidar	-do-
10	Gulbarga	Gulbarga	-do-

ದಾವಣಗೆರೆ ಡಿ.ಆರ್.ಎಂ. ಕಾಲೇಜಿಗೆ ಸ್ವಂತ ಕಟ್ಟಡ ಒದಗಿಸುವುದು

2606(2944) ಶ್ರೀ ರವೀಂದ್ರನಾಥ ಎಸ್.ವಿ. (ಮಾಯಕೊಂಡ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ತಮ್ಮ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ದಾವಣಗೆರೆಯಲ್ಲಿರುವ ಡಿ.ಆರ್.ಡಿ. ಕಾಲೇಜು ಸ್ಥಾಪನೆಯಾದದ್ದು ಯಾವಾಗ;

ಆ) ಬಾಪೂಜಿ ಶಿಕ್ಷಣ ಸಂಸ್ಥೆಗೆ ಡಿ.ಆರ್.ಎಂ. ಕಾಲೇಜು ಯಾವಾಗ ವರ್ಗಾವಣೆ ಆಯಿತು; (ವಿವರ ನೀಡುವುದು)

ಇ) ದಾವಣಗೆರೆ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡವಿದೆಯೇ?

ಈ) ಇಲ್ಲದಿದ್ದಲ್ಲಿ, ಈ ಕಾಲೇಜಿಗೆ ಸ್ವಂತ ಕಟ್ಟಡವನ್ನು ಎಂದಿನಿಂದ ನೀಡಲಾಗುವುದು; ಈ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ?

ಡಾ: ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ದಾವಣಗೆರೆಯಲ್ಲಿರುವ ಡಿ.ಆರ್.ಡಿ. ಕಾಲೇಜು 1947ರಲ್ಲಿ ಸ್ಥಾಪನೆಯಾಯಿತು.

ಆ) ಬಾಪೂಜಿ ಶಿಕ್ಷಣ ಸಂಸ್ಥೆಗೆ ಡಿ.ಆರ್.ಎಂ. ಕಾಲೇಜು 1958ರಲ್ಲಿ ವರ್ಗಾವಣೆಯಾಯಿತು. 1973 ಡಿ.ಆರ್.ಎಂ. ವಿಜ್ಞಾನ ಕಾಲೇಜು ಹಾಗೂ ಡಿ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜೆಂದು ವಿಭಜಿಸಲಾಯಿತು.

ಇ) ಇಲ್ಲ.

ಈ) ನಿವೇಶನ ಪಡೆಯಲು ಹಾಗೂ ಹೊಸ ಕಟ್ಟಡಗಳ ಕಾಮಗಾರಿಗಾಗಿ ಹುಡ್ಕೋ ಸಂಸ್ಥೆಯಿಂದ ನೆರವನ್ನು ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಸ್ವಚ್ಛ ಗ್ರಾಮ ಯೋಜನೆ

2602(2442) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಈವರೆಗೆ ಯೋಜನೆಯ ಅಡಿಯಲ್ಲಿ ಎಷ್ಟು ಗ್ರಾಮಗಳು ಎರಡು ಲಕ್ಷ ರೂಪಾಯಿ ದೇಣಿಗೆ ನೀಡಿದೆ? ಜಿಲ್ಲಾವಾರು ವಿವರ ನೀಡಿರಿ:

ಆ) ಸ್ವಚ್ಛ ಗ್ರಾಮ ಯೋಜನೆಯಲ್ಲಿ ಈವರೆಗೆ ಬಿಡುಗಡೆ ಆಗಿರುವ ಹಣವೆಷ್ಟು? (ಜಿಲ್ಲಾವಾರು, ಗ್ರಾಮಗಳ ವಿವರ ನೀಡುವುದು)

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :—

ಅ) ಸ್ವಚ್ಛ ಗ್ರಾಮ ಯೋಜನೆಯಡಿ ರಾಜ್ಯದಲ್ಲಿ ೨೧ ಗ್ರಾಮಗಳು ಎರಡು ಲಕ್ಷ ರೂಪಾಯಿಗಳನ್ನು ವಂತಿಗೆಯಾಗಿ ನೀಡಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-೧ರಲ್ಲಿ ನೀಡಲಾಗಿದೆ.

ಆ) ಸ್ವಚ್ಛ ಗ್ರಾಮ ಯೋಜನೆಯಡಿ ಈವರೆಗೆ ಪ್ರತಿ ಜಿಲ್ಲೆಗೆ ರೂ.೧೦೦.೦೦ ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಜಿಲ್ಲಾವಾರು ಗ್ರಾಮಗಳ ವಿವರಗಳನ್ನು ಅನುಬಂಧ-೧ರಲ್ಲಿ ನೀಡಲಾಗಿದೆ.

ಅನುಬಂಧ -1

(ವಿಧಾನಸಭೆ ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ 2442ರ ಉತ್ತರದ ಲಗತ್ತು)

ಕ್ರಮ ಸಂಖ್ಯೆ	ಜಿಲ್ಲೆ	ಸ್ವಚ್ಛಗ್ರಾಮ ಯೋಜನೆಯಡಿ ಅನುಮೋದನೆ-ಯಾಗಿರುವ ಗ್ರಾಮಗಳ ಸಂಖ್ಯೆ	ರೂ.೨.೦೦ ಲಕ್ಷ ವಂತಿಗೆ ನೀಡಿದ ಗ್ರಾಮಗಳ ಸಂಖ್ಯೆ	ಬಿಡುಗಡೆಯಾದ ಅನುದಾನ ರೂ. ಲಕ್ಷಗಳಲ್ಲಿ
೧.	ಬೆಂಗಳೂರು (ನ)	೨೦		೧೦೦.೦೦
೨.	ಬೆಂಗಳೂರು (ಗ್ರಾ)	೮೭		೧೦೦.೦೦
೩.	ಚಿತ್ರದುರ್ಗ	೩೫		೧೦೦.೦೦